

ಆವರಿಕೆ



ಆರ್ಜೀರಿಯಾ ಕ್ಯುನಿಯೇಟ



ಕೊಮ್ಮೆ ಸೊಪ್ಪಿನ ಹೂವು



ಮುಟ್ಟಿದರೆ ಮುನಿ ಹೂವು



ಸೋಲಾನಮ್ ಏತಿಯೋಪಿಕಂ



ಗಡಿಯಾರದ ಹೂವು

ಮನದ ಕಣ್ಣು ತೆರೆಯುವುದು ಇಂದಿನ ತಾಂತ್ರಿಕಯುಗದಲ್ಲಿ ಕಷ್ಟ ಸಾಧ್ಯವೇ. ಕಾಡುಗಿಡಬಳ್ಳಿಗಳ ವೈಯಾರ–ಮೈಮಾಟ, ಬಣ್ಣಬಣ್ಣದ ಮೋಹಕ ಹೂ ಬಣ್ಣಗಳು, ಮಕರಂದ ಹೀರುವ ದುಂಬಿಗಳು, ಪರಿಸರದ ಈ ಸೂಕ್ಷ್ಮತೆಗಳು ನೆಲ–ಬಾನಿನ ವಿಶಾಲ ಪರದೆಯಲ್ಲಿ ಯಾರ ಕಣ್ಣ ನೋಟಕ್ಕೆ ಸಿಲುಕಲು ಸಾಧ್ಯ?

ಇಂದು ನಾವೆಲ್ಲ ಮೊಬೈಲ್ ಎಂಬ ಮಾಯಾಲೋಕದ ಮೂರು ಇಂಚಿನ ಪರದೆಯೊಳಗೆ ಸೀಮಿತವಾಗಿರುವಾಗ ವಿಶಾಲವಾದ ನೆಲ ಆಗಸ ಜಲಪ್ರಪಂಚವನ್ನು ನೋಡಲು ಹೇಗೆ ಸಾಧ್ಯ? ಕಣ್ಣು ಬಿಡುತ್ತಿರುವ ಮಗುವೂ ಮೊಬೈಲ್ ಪರದೆಗೆ ಕೈಯೊಡ್ಡುತ್ತಿರುವ ಸನ್ನಿವೇಶದಲ್ಲಿ ಆಗಸದ ಚಂದಿರ, ಚುಕ್ಕೆ, ಕತ್ತಲು, ಬೆಳದಿಂಗಳು, ಮಿಂಚು, ಸಿಡಿಲು, ಕಾಡಬಳ್ಳಿಯ ಹೂಗಳು ಕಂಡೀತಾದರೂ ಹೇಗೆ?

ಮನದ ನೆಮ್ಮದಿಯನ್ನು ಅರಸಿ ಮಲೇಷ್ಯಾ, ಸಿಂಗಪುರ ಎಂದೆಲ್ಲ ಸುತ್ತುವ ನಾವು ನಮ್ಮ ಸುತ್ತಲಿರುವ ನಿಸರ್ಗದ ಚೆಲುವೆಯರ ಚೆಲುವನ್ನು ಕಂಡಿರುವುದೇ ಇಲ್ಲ! ನಾ ಕಂಡ ಚೆಲುವೆಯರನ್ನು ಸೆರೆಹಿಡಿದು ತಂದಿರುವೆ. ಈ ಬೆಡಗಿಯರು ತಮ್ಮ ಬಣ್ಣ, ವಿನ್ಯಾಸ, ಅಂದಚೆಂದ, ಒನಪು ವೈಯಾರದ ನೋಟಗಳಿಂದಾಗಿ ನನ್ನ ಮನದೊಳಗೆ ಇಳಿದಿದ್ದಾರೆ. ಮುಂದೊಂದು ದಿನ ಎಂದಾದರೊಮ್ಮೆ ನಿಮ್ಮೊಳಗೂ ಇಳಿದರೆ ಅಂದು ನಿಸರ್ಗದ ಮಾಯಾಲೋಕದ ಬಾಗಿಲು ತೆರೆಯಬಹುದೆಂಬ ಆಶಯ ನನ್ನ ಮನದಲ್ಲಿ ಗೂಡು ಕಟ್ಟಿದೆ.

ಪ್ರತಿಕ್ರಿಯಿಸಿ: **feedback@sudha.co.in**